# ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಶಿಕ್ಷಣ ಫೌಂಡೇಶನ್ ಸಹಭಾಗಿತ್ವದಲ್ಲಿ ಚಿತ್ರದುರ್ಗ ಜಿಲ್ಲೆ ಯಲ್ಲಿ ಕೈಗೊಂಡ ಪ್ರೇರಣಾ ಮತ್ತು FLN ಕಾರ್ಯಚಟುವಟಿಕೆಗಳ ವರದಿ.

ಜಿಲ್ಲೆ:- ಚಿತ್ರದುರ್ಗ

ತಿಂಗಳು: - ಜುಲೈ- ೨೦೨೨-೨೩

ಗೆ,

**ಉಪನಿರ್ದೇಶಕರು (ಆಭಿವೃದ್ಧಿ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಚಿತ್ರದುರ್ಗ

**ಇಂದ,**

ಕುಮಾರ ಟಿ

ಜಿಲ್ಲಾ ಸಂಯೋಜಕರು,

ಚಿತ್ರದುರ್ಗ

## ಪ್ರೇರಣಾ ಕಾರ್ಯಕ್ರಮದ ಸಂಕ್ಷಿಪ್ತ ನೋಟ.




ಮೇಲಿನ ಚಿತ್ರದಲ್ಲಿ ಗಮನಿಸುವಂತೆ ಪ್ರೇರಣಾ ಕಾರ್ಯಕ್ರಮವು ಒಟ್ಟು 4 ಹಂತಗಳಲ್ಲಿ ವಿನ್ಯಾಸವಾಗಿದ್ದು ಅದರಲ್ಲಿ ಮೊದಲನೇ ಹಂತದಲ್ಲಿ ವಿದ್ಯಾರ್ಥಿಗಳು ಯಾವುದೇ ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ಪ್ರೇರಣೆ ನೀಡಲು ಶಿಕ್ಷಣ ಸ್ಟಾರ್ ಹಾಗು ಬ್ಯಾಡ್ಜ್ ಗಳನ್ನು ನೀಡಲಾಗುತ್ತದೆ. ಹಾಗೆಯೇ ಎರಡನೇ ಹಂತದಲ್ಲಿ ವಿದ್ಯಾರ್ಥಿಗಳಿಗೆ ನಿರ್ಭಯವಾದ ವಾತಾವರಣವನ್ನು ನಿರ್ಮಾಣ ಮಾಡಲು ಪ್ರೇರಣಾ ಕ್ಲಬ್ ಮತ್ತು ಸಹಪಾಠಿ ಕಲಿಕೆ ಎಂಬ ಚಟುವಟಿಕೆಗಳನ್ನು ಶಾಲಾ ಹಂತದಲ್ಲಿ ನೋಡಬಹುದು, ಹಾಗೆಯೇ ಮೂರನೇ ಹಂತದಲ್ಲಿ ರಚನಾತ್ಮಕ ಕಲಿಕೆಯಲ್ಲಿ ವಿದ್ಯಾರ್ಥಿಗಳಿಗೆ ಈಗಾಗಲೇ ಸುಮೇರು, ಸುವೇಗ ಮತ್ತು Raimbow ಅಭ್ಯಾಸ ಪುಸ್ತಕ ನೀಡಲಾಗುತ್ತಿದೆ. ಹಾಗೆಯೇ ಮಕ್ಕಳಲ್ಲಿ ಬುನಾದಿ ಸಾಮರ್ಥ್ಯ ಅಭಿವೃದ್ಧಿ ಪಡಿಸುವುದಕ್ಕೆ ವಿದ್ಯಾರ್ಥಿಗಳು ಅಭ್ಯಾಸ ಮಾಡಲು ಪ್ರೇರಣಾ ಕಾರ್ಯಕ್ರಮದಿಂದ FLN ಕಾರ್ಯಕ್ರಮ ಎಂಬ ನೂತನ ಕಾರ್ಯಕ್ರಮವನ್ನು ಜಾರಿಗೊಳಿಸಿದ್ದು, ಇದರಲ್ಲಿ ಕನ್ನಡ, ಇಂಗ್ಲಿಷ್ ಮತ್ತು ಗಣಿತ ಅಭ್ಯಾಸ ಪುಸ್ತಕಗಳು ದೊರೆಯಲಿವೆ. ಹಾಗೆಯೇ ನಾಲ್ಕನೇ ಹಂತವಾದ ಉದ್ದೇಶಪೂರ್ವಕ ಕಲಿಕೆ ಎಂಬ ಹಂತದಲ್ಲಿ ಸಚಿತ್ರ ಪ್ರಗತಿ ನೋಟ ಮತ್ತು ನನ್ನ ಕಲಿಕಾ ಪ್ರಯಾಣ ಎಂಬ ಕಾರ್ಡ್ ಗಳನ್ನು ನೀಡಲಾಗುತ್ತಿದೆ.

ಪೀಠಿಕೆ

ಶಿಕ್ಷಣಫೌಂಡೇಶನ್ ನ ಪ್ರೇರಣಾ ಕಾರ್ಯಕ್ರಮವನ್ನು ಸರ್ಕಾರವು ಸ್ವೀಕರಿಸಿ, ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಯಲ್ಲಿ ಅಳವಡಿಸಿರುವುದು ನಮಗೆ ಬಹಳ ಹೆಮ್ಮೆಯ ವಿಷಯವಾಗಿದೆ. ಉತ್ತಮ ಗುಣಮಟ್ಟದ ಶಿಕ್ಷಣವನ್ನು ಪ್ರತಿ ಮಗುವಿಗೂ ತಲುಪಿಸುವಲ್ಲಿ ನಮ್ಮ ಜವಾಬ್ದಾರಿ ಇನ್ನೂ ಇದೆ ಎಂಬುದು ನಮಗೆ ತಿಳಿದಿರುವ ವಿಷಯ, ಹಾಗಾಗಿ ಪ್ರಸ್ತುತ ಸನ್ನಿವೇಶದಲ್ಲಿ ಕೊವಿಡ್-19 ರಿಂದ ಮಕ್ಕಳ ನಿರಂತರ ಕಲಿಕೆಗೆ ಹಿನ್ನಡೆ ಹಾಗೂ ಕಲಿಕೆ ಅಂತರ ಕಡಿಮೆ ಮಾಡುವ ನಿಟ್ಟಿನಲ್ಲಿ ಜೊತೆಗೆ ಪ್ರೇರಣಾ ಕಾರ್ಯಕ್ರಮವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡುವ ನಿಟ್ಟಿನಲ್ಲಿ ಕೆಳಗಿನ ಬುನಾದಿ ಸಾಕ್ಷರತೆ ಸಂಖ್ಯಾ ಜ್ಞಾನ ಮತ್ತು ಈ ಹಿಂದಿನ ಎರಡು ತರಗತಿಗಳಲ್ಲಿ ಅತ್ಯಗತ್ಯವಾಗಿ ಗಳಿಸಬೇಕಿದ್ದ ಕಲಿಕಾ ಫಲಗಳು ಇವುಗಳನ್ನು ಬುನಾದಿ ಸಾಕ್ಷರತೆ ಸಂಖ್ಯಾ ಜ್ಞಾನ ಇವುಗಳನ್ನು ಅಭ್ಯಾಸ ಮಾಡಲು ಕನ್ನಡ, ಇಂಗ್ಲಿಷ್ ಮತ್ತು ಗಣಿತ ಪುಸ್ತಕ ಅಭ್ಯಾಸ ಪುಸ್ತಕಗಳಾಗಿ ಇವುಗಳನ್ನು ಪ್ರೇರಣಾ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ. ಮತ್ತು ಈ ಅಭ್ಯಾಸ ಪುಸ್ತಕಗಳನ್ನು ಸರ್ಕಾರಿ ಪ್ರಾಥಮಿಕ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಿಗೆ ಸರಬರಾಜು ಮಾಡಲಾಗುತ್ತದೆ ಈ ಕಾರ್ಯಕ್ರಮಕ್ಕೆ ಪೂರ್ವಕವಾಗಿ ಅಭ್ಯಾಸಮಾಡಲು ವಿದ್ಯಾರ್ಥಿಗಳಿಗೆ ಅಭ್ಯಾಸ ಪುಸ್ತಕಗಳು

ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳಿಗೆ ಸರಬರಾಜು ಮಾಡಲಾಗುತ್ತದೆ ( ನಾಲ್ಕನೇ ತರಗತಿಯಿಂದ ಏಳನೇ ತರಗತಿವರೆಗೆ ಎರಡು ಸೆಮಿಸ್ಟರ್ ಹಂತದಲ್ಲಿ ನೀಡಲಾಗುತ್ತಿದೆ )

**ಜುಲೈ ತಿಂಗಳಲ್ಲಿ ಕೈಗೊಂಡ ಪ್ರಮುಖ ಚಟುವಟಿಕೆಗಳು.**

1. FLN ಕಾರ್ಯಕ್ರಮದ ಕುರಿತು ಚಿತ್ರದುರ್ಗ ಜಿಲ್ಲೆಯ ಆರು ತಾಲೂಕಿನಲ್ಲಿಯೂ BEO /BRC /BRP/CRP ರವರಿಗೆ ಮಾಹಿತಿ ನೀಡಲಾಯಿತು.

2. ಚಿತ್ರದುರ್ಗ ಜಿಲ್ಲೆಯಲ್ಲಿ 6 ತಾಲೂಕುಗಳಿಂದ 20 ಕಂಪ್ಯೂಟರ್ ಲ್ಯಾಬ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಅಳವಡಿಸಲು BEO/BRC/BRP ಮೂಲಕ ಆಯ್ಕೆ ಮಾಡಲಾಗಿದೆ

ಚಿತ್ರದುರ್ಗ ಜಿಲ್ಲೆಯ ತಾಲೂಕುವಾರು ಕಂಪ್ಯೂಟರ್ ಲ್ಯಾಬಿನ ಮಾಹಿತಿ

ಚಿತ್ರದುರ್ಗ 4, ಹಿರಿಯೂರು -4, ಚಳ್ಳಕೆರೆ -3, ಹೊಳಲ್ಕೆರೆ -3, ಹೊಸದುರ್ಗ-3, ಮೊಳಕಾಲ್ಮೂರು -3 ಒಟ್ಟು - **20**

3. ಚಿತ್ರದುರ್ಗ ಜಿಲ್ಲೆಯ ಆರು ತಾಲೂಕಿನ ಜುಲೈ ತಿಂಗಳಲ್ಲಿ 244 ಶಾಲೆಗಳು, 801 ಶಿಕ್ಷಕರು, 8412 ವಿದ್ಯಾರ್ಥಿಗಳಿಗೆ FLN ಕಾರ್ಯಕ್ರಮದ ಬಗ್ಗೆ ಮಾಹಿತಿ ಹೇಳಲಾಗಿದೆ.

4. ಚಿತ್ರದುರ್ಗ ಜಿಲ್ಲೆಯಿಂದ 6 ಜನ ಶಿಕ್ಷಣ ಫೌಂಡೇಶನ್ ನ ತಾಲೂಕಿನ FLN ಸಂಯೋಜಕ ರಿಂದ ಈ ತಿಂಗಳಲ್ಲಿ ಭೇಟಿ ಮಾಡಿದ ಶಾಲಾ ವಿವರ ಈ ಕೆಳಗಿನಂತೆ ಇದೆ

| ಕ್ರ. ಸಂ | ತಾಲ್ಲೂಕಿನ ಹೆಸರು | BEO/BRC/BRP/ECO | CRP | ಶಿಕ್ಷಕರು | ಮಕ್ಕಳು | **Baseline Assessment** ಶಾಲಾ ಮಾಹಿತಿ | **Baseline Assessment** ಬಾಗವಹಿಸಿದ ಮಕ್ಕಳು |
|---|---|---|---|---|---|---|---|
| 01 | ಚಿತ್ರದುರ್ಗ | **07** | **14** | **181** | **1148** | **05** | **80** |
| 02 | ಹಿರಿಯೂರು | **19** | **25** | **215** | **1031** | 05 | **80** |
| 03 | ಚಳ್ಳಕೆರೆ | **04** | **05** | **77** | **1816** | 06 | **96** |
| 04 | ಹೊಳಲ್ಕೆರೆ | **03** | **12** | **106** | **1933** | 05 | **80** |
| 05 | ಹೊಸದುರ್ಗ | **01** | **08** | **78** | **740** | 03 | **48** |
| 06 | ಮೊಳಕಾಲ್ಮೂರು | **04** | **14** | **144** | **1744** | 07 | **112** |
| | ಒಟ್ಟು | **38** | **78** | **801** | **8412** | 26 | **496** |

**ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕಿನ ಜುಲೈ ತಿಂಗಳಲ್ಲಿ ನಡೆದ ಪ್ರೆರಾಣಾಕಾರ್ಯಕ್ರಮ ಮತ್ತು FLN ಕಾರ್ಯಕ್ರಮ ದ ಪ್ರಮುಖ ಛಯಾ ಚಿತ್ರಗಳು**




| | |
|---|---|
| ಹಿರಿಯೂರು ವಿಭಾಗ - ಮಂಜುನಾಥ  | ಚಿತ್ರದುರ್ಗ ವಿಭಾಗ - ಕುಮಾರ. ಟಿ   |
| ಮೊಳಕಾಲ್ಮೂರು ವಿಭಾಗ - ಪ್ರಭಕರ ಪಿ.ವಿ   | ಚಳ್ಳಕೆರೆ ವಿಭಾಗ - ರಾಜಣ್ಣ ಟಿ  |

| | |
|---|---|
| <br>ಹೊಸದುರ್ಗ ವಿಭಾಗ - ಶಿವರಾಜ್ ನಾಯ್ಕ | ಹೊಳಲ್ಕೆರೆ ವಿಭಾಗ - ಪ್ರಭು ಆರ್<br> |

.

## ಮುಂದಿನ ತಿಂಗಳ ಕಾರ್ಯಯೋಜನೆಗಳು:-

1. ಚಿತ್ರದುರ್ಗ ಜಿಲ್ಲೆಯಲ್ಲಿ ೧೦ ಶಾಲೆಯಲ್ಲಿ ಕಂಪ್ಯೂಟರ್ ಲ್ಯಾಬ್ ಪ್ರಾರಂಭಿಸುವುದು.
2. ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕಿನಲೂ FLN ಅಭ್ಯಾಸ ಪುಸ್ತಕ ನೀಡುವುದು
3. ಇಲಾಖೆ ಅದಿಕಾರಿ ಯೊಂದಿಗೆ ಶಾಲೆಗಳಿಗಎ ಬೇಟಿನೀಡಿ ಪ್ರೇರಣಾ ಮತ್ತು FLN ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡುವುದು.
4. ಆರು ತಾಲ್ಲೂಕಿನಲ್ಲಿ CRP/HM/ಶಿಕ್ಷಕರಿಗೆ ಪ್ರೇರಣಾ ಮತ್ತು FLN ಕಾರ್ಯಕ್ರಮದ ಬಗ್ಗೆ ತರಬೇತಿ ನೀಡುವುದು.
5. ಬೇಸ್ಲೈನ್ ಅಸೆಸ್ಮೆಂಟ್ ಪೂರ್ಣಗೊಳಿಸುವುದು.
6. ಇತರೆ

ಧನ್ಯವಾದಗಳು

**************************************************************************************************